# ಶ್ರೀಗದಾಧರಸ್ತೋತ್ರಮ್-೧



**ಘನಚೇತನಮಕ್ರಿಯಮಾದಿಮಜಂ**
**ಚಿರ-ನಿಶ್ಚಲ-ನಿಷ್ಕಲ-ನಿರ್ವಿರುಜಮ್ ।**
**ಸುಖಸದ್ಮ-ವಿಶುದ್ಧ-ವಿಬುದ್ಧವರಂ**
**ಪ್ರಣಮಾಮಿ ಗದಾಧರ-ಬ್ರಹ್ಮಪರಮ್ ॥ ೧ ॥**

ಚೈತನ್ಯದ ಘನಸ್ವರೂಪಿಯಾದ, ಕ್ರಿಯಾರಹಿತರಾದ, ಎಲ್ಲದಕ್ಕೂ ಆದಿಯಾದ, ಜನ್ಮರಹಿತರಾದ, ಚಲಿಸದವರೂ ಅವಯವ ರಹಿತರೂ ರೋಗರಹಿತರೂ ಆದ, ಸುಖದ ನೆಲೆಯಾದ, ಅತ್ಯಂತ ಶುದ್ಧರೂ ಪರಿಪೂರ್ಣ ಜ್ಞಾನಿಯೂ ಆದ ಪರಬ್ರಹ್ಮ ರೂಪಿ ಗದಾಧರ ಶ್ರೀರಾಮಕೃಷ್ಣರಿಗೆ ನಮಸ್ಕರಿಸುತ್ತೇನೆ.

**ಶತ-ಶೌರಿ-ಮುರಾರಿ-ತರಂಗಯುತಂ**
**ಅಯುತಾಯುತ-ಭಾಸ್ಕರ-ಕುಕ್ಷಿಧೃತಮ್ ।**
**ಸುವಿಶಾಲ-ಸಮುದ್ರ-ಸುದಭ್ರಕರಂ**
**ಪ್ರಣಮಾಮಿ ಗದಾಧರ-ಬ್ರಹ್ಮಪರಮ್ ॥ ೨ ॥**

ನೂರಾರು ಶೌರಿ, ಮುರಾರಿ ಮೊದಲಾದ ಅವತಾರಗಳೆಂಬ ಅಲೆಗಳಿಂದ ಕೂಡಿದ, ಲಕ್ಷಾಂತರ ಸೂರ್ಯರನ್ನು ತನ್ನೊಳಗೆ ಧರಿಸಿಕೊಂಡಿರುವ ವಿಶಾಲ ಸಮುದ್ರದ ಬಲಿಷ್ಠ ಹಾಗೂ ಬೃಹತ್ ಅಲೆಯಂತಿರುವ ಪರಬ್ರಹ್ಮರೂಪಿ ಗದಾಧರ ಶ್ರೀರಾಮಕೃಷ್ಣರಿಗೆ ನಮಸ್ಕರಿಸುತ್ತೇನೆ.

**ಕ್ಷುದಿರಾಮ-ವಿರಾಮ-ವಿಲಾಸಕರಂ**
**ಛಲಜೃಂಭಿತಕಾರಣಕಾರ್ಯಬಲಮ್ ।**
**ಜಿತಕಾಂಚನಕಾಮ-ಪ್ರಪಂಚಹರಂ**
**ಪ್ರಣಮಾಮಿ ಗದಾಧರ-ಬ್ರಹ್ಮಪರಮ್ ॥ ೩ ॥**

ಕ್ಷುದಿರಾಮನ ಮನೆಯನ್ನು ಆನಂದ ವಿಲಾಸಗಳಿಂದ ತುಂಬಿದ, ಮಾಯಾಪ್ರಭಾವದಿಂದ ವಿಕಾಸಗೊಂಡ ಕಾರಣ-ಕಾರ್ಯ ಬಲ ವನ್ನರಿತಿರುವ, ಕಾಂಚನ-ಕಾಮಗಳನ್ನು ಗೆದ್ದು ಪ್ರಪಂಚವನ್ನು ದೂರೀಕರಿಸಿಕೊಂಡಿರುವ ಪರಬ್ರಹ್ಮರೂಪಿ ಗದಾಧರ ಶ್ರೀರಾಮ ಕೃಷ್ಣರಿಗೆ ನಮಸ್ಕರಿಸುತ್ತೇನೆ.

**ಯುಗಧರ್ಮಪ್ರವರ್ತಕ-ಗುಪ್ತನರಂ**
**ಜನಪಾವನ-ಗಾಂಗ್ಯತಟಾವಸಥಮ್ ।**
**ಶಿಶುಸೌಮ್ಯಮಗಮ್ಯ-ಪ್ರಣಮ್ಯವರಮ್**
**ಪ್ರಣಮಾಮಿ ಗದಾಧರ-ಬ್ರಹ್ಮಪರಮ್ ॥ ೪ ॥**

ನರರೂಪದಲ್ಲಿದ್ದುಕೊಂಡು ಯುಗಧರ್ಮವನ್ನು ಪ್ರವರ್ತಿಸು ವಂತೆ ಮಾಡಿದ, ಸಕಲರನ್ನೂ ಪಾವನಗೊಳಿಸುವ ಗಂಗೆಯ ದಡ ದಲ್ಲಿ ವಾಸಿಸುವ, ಮಗುವಿನಂತೆ ಪ್ರಶಾಂತರಾಗಿರುವ, ಅರಿವಿಗೆ ನಿಲುಕದ, ನಮಸ್ಕರಿಸಲು ಯೋಗ್ಯರಾದವರಲ್ಲಿ ಶ್ರೇಷ್ಠರಾದ ಪರ ಬ್ರಹ್ಮರೂಪಿ ಗದಾಧರ ಶ್ರೀರಾಮಕೃಷ್ಣರಿಗೆ ನಮಸ್ಕರಿಸುತ್ತೇನೆ.

— ಶರಚ್ಚಂದ್ರ ಚಕ್ರವರ್ತಿ

## ಸೂಕ್ತಿಪ್ರಭ

**ಯಾ**ರು ಬಡವನಿಗೆ ಒಂದು ಸಣ್ಣ ನಾಣ್ಯವನ್ನು ಕೊಡು ತ್ತಾನೋ ಅವನ ಮೇಲೆ ಆರು ಆಶೀರ್ವಾದಗಳು ಬಂದು ಸೇರುವವು. ಆದರೆ ಯಾರು ಅವನಲ್ಲಿ ಅನುಕಂಪದ ನುಡಿ ಗಳನ್ನಾಡುವನೋ ಅವನಿಗೆ ಹನ್ನೊಂದು ಆಶೀರ್ವಾದಗಳು ಬಂದೊದಗುವುವು.

— ತಾಲ್ಮಡ್

**ಹ**ಗಲನ್ನು ಒಂದು ಸಣ್ಣ ರಂಧ್ರದ ಮೂಲಕವೂ ಕಾಣ ಬಹುದು. ಅದೇ ರೀತಿ ಒಬ್ಬ ವ್ಯಕ್ತಿಯ ಚಾರಿತ್ರ್ಯವನ್ನು ಅವನ ಸಣ್ಣ ಸಂಗತಿಯೂ ಪ್ರಕಟಪಡಿಸುವುದು.

— ಸ್ಯಾಮುವೆಲ್ ಸ್ಮೈಲ್ಸ್

**ಹೃ**ದಯದಲ್ಲಿ ಅಲೌಕಿಕ ಜಾಗೃತಿ ಉಂಟಾದಾಗ ನಮ್ಮ ಆತ್ಮವು ಕತ್ತಲಿನಿಂದ ಬೆಳಕಿನೆಡೆಗೆ, ನಶ್ವರದಿಂದ ಶಾಶ್ವತದೆಡೆಗೆ ದೃಷ್ಟಿ ಹೊರಳಿಸುವುದು.

— ಪ್ಲೇಟೋ

**ಯೇನ ಕೇನ ಪ್ರಕಾರೇಣ ಯಸ್ಯ ಕಸ್ಯಾಪಿ ದೇಹಿನಃ ।**
**ಸಂತೋಷಂ ಜನಯೇತ್ ಪ್ರಾಜ್ಞಸ್ತದೇವೇಶ್ವರಪೂಜನಮ್ ॥**

**ಬು**ದ್ಧಿವಂತನು ಯಾವುದೇ ಪ್ರಕಾರದಿಂದ ಯಾವ ಒಬ್ಬ ಮನುಷ್ಯನಿಗಾದರೂ ಸಂತೋಷವನ್ನುಂಟುಮಾಡಬೇಕು. ಹೀಗೆ ಸಂತೋಷಗೊಳಿಸುವುದೇ ಈಶ್ವರಪೂಜೆ.

— ಸುಭಾಷಿತ